೨-೩೦ ಪಿ.ಎಂ.

ತಮ್ಮ ತಪ್ಪು ಯಾವುದೂ ಇಲ್ಲದೆ, ಮೇಲೆ ಹೇಳಿದಂತಹ ಸಿಬ್ಬಂದಿಯವರು ಶಿಕ್ಷೆಯನ್ನು ಅನುಭವಿಸಬೇಕಾಗಿರುವುದನ್ನು ತನ್ನ ಗಮನಕ್ಕೆ ತರಲಾದ ಅನಂತರವೂ ಮೂರು ವರ್ಷಗಳುದ್ದಕ್ಕೂ ತಕ್ಕಂತೆ ಸ್ಪಂದಿಸಿದ ಸರಕಾರ ಇನ್ನಾದರೂ ಪುರುಸೊತ್ತು ಮಾಡಿಕೊಂಡು ಕ್ಷಿಪ್ರ ಕ್ರಮ ಕೈಗೊಳ್ಳಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಸಚಿವರು).—ಸನ್ಮಾನ್ಯ ಅಧ್ಯಕ್ಷರೆ, ಸಂಯುಕ್ತ ಪಿರಿಯಂ ಕಾಲೇಜುಗಳಿಗೆ ತ್ರಿವಿಧ ಸೌಲಭ್ಯ ಯೋಜನೆಯನ್ನು ದಿನಾಂಕ ೧-೪-೭೭ ರಿಂದ ವಿಸ್ತರಿಸಿರುವುದರಿಂದ ಸದರಿ ನೌಕರರು ಹಿಂದೆ ತ್ರಿವಿಧ ಸೌಲಭ್ಯ ಯೋಜನೆ ಅನುದಾನಿತ ಶಾಲೆಗಳಿಗೆ ಅವರು ದಿನಾಂಕ ೧-೪-೧೯೭೭ ರಿಂದಲೇ ತ್ರಿವಿಧ ಸೌಲಭ್ಯಕ್ಕೆ ಒಳಪಟ್ಟು ಉಪದಾನ ಕೊಡುವ ಬಗ್ಗೆ ಮಹಾಲೇಖಪಾಲರು ಆಕ್ಷೇಪಣೆ ಎತ್ತಿದ್ದಾರೆ. ಯಾವ್ಯಾಒಬ್ಬ ನೌಕರನು ಮೊದಲು ಪ್ರೌಢಶಾಲೆಯಲ್ಲಿ ಪೂರ್ವ ಸೇವೆಯ ಬಗ್ಗೆ ಆಡಳಿತ ಮಂಡಳಿಯು ವಂತಿಗೆಯನ್ನು ಜಮಾ ಮಾಡಿದ್ದರಿಂದ ಅವರ ಸಂಪೂರ್ಣ ಸೇವೆಯನ್ನು ಡಿ.ಸಿ.ಆರ್.ಜಿ. ಕೊಡುವಾಗ ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು. ಆದರೆ ಪ್ರೌಢಶಾಲೆಯು ಸಹ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದು ೧೯೭೨ ರಿಂದ ೧೯೭೭ರವರೆಗೆ ಉಪನ್ಯಾಸಕರಾಗಿ ಅಥವಾ ಪ್ರಾಂಶುಪಾಲರಾಗಿ ಬಡ್ತಿ ಆದಮೇಲೆ ಆ ಅವಧಿಯ ಸೇವೆಯನ್ನು ಉಪದಾನಕ್ಕೆ ತೆಗೆದುಕೊಳ್ಳುತ್ತಿಲ್ಲ. ಆ ಅವಧಿಯಲ್ಲಿ ಸಂಯುಕ್ತ ಪಿರಿಯ ಕಾಲೇಜುಗಳಿಗೆ ತ್ರಿವಿಧ ಸೌಲಭ್ಯ ಇರಲಿಲ್ಲ. ೧-೪-೧೯೭೭ ರಿಂದ ಮಾತ್ರ ಅನ್ವಯವಾಗಿದೆ. ಈ ಅವಧಿಯನ್ನು ಸಹ ಉಪದಾನದ ಲೆಕ್ಕಕ್ಕೆ (ಡಿ.ಸಿ.ಆರ್.ಜಿ.)ಗೆ ತೆಗೆದುಕೊಳ್ಳುವ ಬಗ್ಗೆ ಸರ್ಕಾರ ಪರಿಶೀಲನೆಯಲ್ಲಿದೆ. ನೌಕರನು ಮೊದಲು ಪ್ರೌಢಶಾಲೆಯಲ್ಲಿ ಸೇವೆಯನ್ನು ಪ್ರಾರಂಭ ಮಾಡಿ ಸಂಯುಕ್ತ ಪಿರಿಯ ಕಾಲೇಜಿನ ಸೇವೆಯ ನಂತರ ನಿವೃತ್ತಿ ಹೊಂದಿದಲ್ಲಿ ಪೂರ್ಣ ಸೇವೆಯ ಬಗ್ಗೆ ಆಡಳಿತ ಮಂಡಲಿಯು ವಂತಿಗೆಯನ್ನು ಜಮಾ ಮಾಡಬೇಕಾಗುವುದು. ಸದ್ಯದ ಪರಿಸ್ಥಿತಿಯಲ್ಲಿ ಸರ್ಕಾರದ ವಂತಿಗೆಯನ್ನು ಪೂರ್ಣ ರದ್ದುಗೊಳಿಸಿದೆ. ಆದುದರಿಂದ ಇವರ ಪೂರ್ಣ ಸೇವೆಯನ್ನು ಉಪಧಾನಕ್ಕೆ ತೆಗೆದುಕೊಳ್ಳಲು ಮಹಾಲೇಖಪಾಲರಿಗೆ ತಿಳಿಸಲಾಗುವುದು.

೨. ಉಡುಪಿ ತಾಲ್ಲೂಕಿನಲ್ಲಿ ಪಾಮೋಲಿನ್ ಎಣ್ಣೆಯ ಸರಬರಾಜಿನಲ್ಲಿ ಕೊರತೆ

ಶ್ರೀಮತಿ ಮನೋರಮಾ ಮಧ್ವರಾಜ್.—ಮಾನ್ಯ ಅಧ್ಯಕ್ಷರೆ, ದೇಶದಲ್ಲಿ ಖಾದ್ಯ ತೈಲಗಳ ಕೊರತೆ ಉಂಟಾದಾಗ ಕೇಂದ್ರಸರ್ಕಾರ ದೀನದಲಿತ ಪಂಡಿತ ಪಾಮರರೆನ್ನದೆ ಎಲ್ಲರಿಗೂ ಪಾಮೊಲಿನ್ ಎಣ್ಣೆ ತರಿಸಿ ಪೂರೈಸುವ ವ್ಯವಸ್ಥೆ ಮಾಡಿತ್ತು. ನ್ಯಾಯ ಬೆಲೆಯಲ್ಲಿ ದೊರಕುವ ಈ ಎಣ್ಣೆ ಆರೋಗ್ಯ ದೃಷ್ಟಿಯಿಂದಲೂ ಉತ್ತಮವಾಗಿ ಜನಪ್ರಿಯವಾಗಿತ್ತು, ಆದರೆ ಇತ್ತೀಚಿನ ದಿನಗಳಲ್ಲಿ ದಕ್ಷಿಣಕನ್ನಡ ಜಿಲ್ಲೆಯಿಲ್ಲಿ ಅದರಲ್ಲೂ ಉಡುಪಿ ತಾಲ್ಲೂಕಿನಲ್ಲಿ ಪಾಮೊಲಿನ್ ತೈಲದ ವಿಪರೀತ ಕೊರತೆ ಉಂಟಾಗಿದೆ. ಮಹಾನಗರಪಾಲಿಕೆಗಳ ಸಂಘಟಿತ ಗ್ರಾಹಕ ವರ್ಗ ಇರುವಲ್ಲಿ, ಅಧಿಕಾರಿಗಳು, ಶ್ರೀಮಂತರು, ಮೇಲಂ ಮಧ್ಯಮ ವರ್ಗದ ಜನ ಇರುವಲ್ಲಿ ಸಾಕಷ್ಟು ಪಾಮೊಲಿನ್ ಈಗಲೂ ಬರುತ್ತಿದ್ದರೆ, ಚಿಕ್ಕ ಪುರಸಭೆಗಳಲ್ಲಿ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಅದೂ ತೀರ ಬಡ ಕೃಷಿಕಾರ್ಮಿಕರು, ಬೇಸಾಯಗಾರರು, ಚಿಕ್ಕ ಉದ್ಯೋಗಿಗಳು ಇರುವಂಥ ಕಡೆಯ ಜನಕ್ಕೆ ಪಾಮೊಲಿನ್‌ನ ಕೊರತೆ ಆಗಿದೆ. ''ಪಾಮೊಲಿನ್‌ಗಾಗಿ ಬಾಯಿ ಬಾಯಿ ಬಿಡುವಂತಾಗಲು ನಾವೇನು ಪಾಪಪಾಡಿದ್ದೇವೆ ?'' ಎಂದು ಬಡಪಾಯಿಗಳು ಪರಿತಪಿಸುತ್ತಿದ್ದಾರೆ. ಎಲ್ಲದರಲ್ಲೂ ಕೊರತೆಯ ವಿಕ್ರಮ ಸಾಧಿಸಿದ ಈ ಸರಕಾರ ಪಾಮೋಲಿನ್‌ನನ್ನಾದರೂ ಸಾಕಷ್ಟು ಪೂರೈಸಿ, ಪುಣ್ಯಕಟ್ಟಿಕೊಂಡು ಪಾಪದ ಹೊರೆ ಕಡಿಮೆ ಮಾಡಿಕೊಳ್ಳಲಿ ಎಂದು ಬಡಗ್ರಾಹಕರ ಪರವಾಗಿ ಒತ್ತಾಯಿಸುತ್ತಿದ್ದೇನೆ.

ಶ್ರೀ ವಿಶ್ವನಾಥ ರೆಡ್ಡಿ ಮುದ್ನಾಳ್.—ಮಾನ್ಯ ಅಧ್ಯಕ್ಷರೆ, ಆಮದಾದ ತಾಳಿಎಣ್ಣೆಯನ್ನು ಕೇಂದ್ರ ಸರ್ಕಾರವು ರಾಜ್ಯಗಳಿಗೆ ಅವಶ್ಯಕತೆಗೆ ಅನುಗುಣವಾಗಿ ಹಂಚಿಕೆ ಮಾಡುತ್ತಿದೆ. ೧೯೭೬-೭೭ರ ಸಾಲಿನಲ್ಲಿ ರಾಜ್ಯದ ಖಾದ್ಯ ತೈಲದ ಉತ್ಪಾದನೆಯು ಕಡಿಮೆ ಇದ್ದುದರಿಂದ ಹೆಚ್ಚಿನ ಪ್ರಮಾಣದಲ್ಲಿ ಬಿಡುಗಡೆ ಮಾಡುತ್ತಿತ್ತು. ಉದಾಹರಣೆಗೆ ನವೆಂಬರ್ ೧೯೭೭ರಲ್ಲಿ ೧೧,೬೮೫ ಮೆಟ್ರಿಕ್ ಟನ್ ತಾಳಿ ಎಣ್ಣೆಯನ್ನು ಬಿಡುಗಡೆ ಮಾಡಲಾಗಿತ್ತು. ಈ ಪ್ರಮಾಣವು ಜನವರಿ ೧೯೭೮ರಿಂದ ಒಂದೇ ಸಮ ಕಡಿಮೆಯಾಗುತ್ತಿದೆ ನವೆಂಬರ್ ೧೯೭೮ರಲ್ಲಿ ೫,೦೦೦ ಮೆಟ್ರಿಕ್ ಟನ್ ಬಿಡುಗಡೆಯಾಗಿದೆ, ಡಿಸೆಂಬರ್ ೧೯೭೮ರಲ್ಲಿ ೧,೭೫೦ ಮೆಟ್ರಿಕ್ ಟನ್ ಬಿಡುಗಡೆ ಮಾಡಲಾಗಿದೆ. ಇದರಲ್ಲಿ ಕೇಂದ್ರ ಸರ್ಕಾರವು ಬಿಡುಗಡೆ ಮಾಡಿರುವ ೫೮೦ ಮೆಟ್ರಿಕ್ ಟನ್ ಸೋಯಾಬಿನ್ ಎಣ್ಣೆಯೂ ಸಹ ಸೇರಿರುತ್ತದೆ. ಆದ್ದರಿಂದ ಈ ರಾಜ್ಯಕ್ಕೆ ೧,೨೫೦ ಮೆಟ್ರಿಕ್ ಟನ್ ತಾಳಿ ಎಣ್ಣೆಯು ಸರಬರಾಜು ಆಗಿರುತ್ತದೆ. ಇಷ್ಟೇ ಅಲ್ಲದೆ ಈ ಉಳಿದ ೧,೨೫೦

ಮೆಟ್ರಿಕ್ ಟನ್‌ಗಳ ಪೈಕಿ ೭೫೦ ಮೆಟ್ರಿಕ್ ಟನ್‌ಗಳನ್ನು ೧ ಕೆ.ಜಿ. ಚೀಲಗಳಲ್ಲಿ ಬಿಡುಗಡೆ ಮಾಡಬೇಕೆಂದು ಕೇಂದ್ರ ಸರ್ಕಾರವು ಆದೇಶವಿತ್ತಿದೆ ಈ ಕಾರಣಗಳಿಂದಾಗಿ ಪಡಿತರ ಚೀಟಿದಾರರಿಗೆ ಬಿಡುಗಡೆ ಮಾಡಲು ಬಹಳ ಕಡಿಮೆ ಪ್ರಮಾಣದ ತಾಳೆ ಎಣ್ಣೆಯು ಈಗ ಸಿಗುತ್ತಿದೆ. ಈ ಕಡಿಮೆ ಪ್ರಮಾಣದ ಎಣ್ಣೆಯನ್ನು ಪಟ್ಟಣ ಪ್ರದೇಶಗಳಿಗೆ ಪಡಿತರ ಚೀಟಿಯೊಂದಕ್ಕೆ ೩೦೦ ಗ್ರಾಂನಂತೆಯೂ ಮತ್ತು ಗ್ರಾಮಾಂತರ ಪ್ರದೇಶಗಳಿಗೆ ಪಡಿತರ ಚೀಟಿಯೊಂದಕ್ಕೆ ೧೦೦ ಗ್ರಾಂನಂತೆಯೂ ಬಿಡುಗಡೆ ಮಾಡಲಾಗಿದೆ,

ಈ ಮೇಲಿನ ಕಾರಣಗಳಿಂದಾಗಿ ಚಿಕ್ಕ ಪೇರಸಭೆಗಳ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ತಾಳೆ ಎಣ್ಣೆಯ ಕೊರತೆಯು ಉಂಟಾಗಿರುವುದು ಸಹಜ. ಇದೇ ಕಾರಣಕ್ಕಾಗಿ ಉಡುಪಿ ನಗರದಲ್ಲೂ ತಾಳೆ ಎಣ್ಣೆ ಹಂಚಿಕೆ ಕಡಿಮೆ ಆಗಿರುವ ಸಂಭವವಿರುತ್ತದೆ. ಕೇಂದ್ರ ಸರ್ಕಾರವು ಹೆಚ್ಚುವರಿ ಖಾದ್ಯ ತೈಲವನ್ನು ರಾಜ್ಯಕ್ಕೆ ಬಿಡುಗಡೆ ಮಾಡಿದರೆ ಮಾತ್ರ ಸಾಕಷ್ಟು ಪ್ರಮಾಣದಲ್ಲಿ ಪಡಿತರ ಚೀಟಿದಾರರಿಗೆ ನೀಡಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಆದೇ ಕೊರತೆಯು ಮುಂದುವರಿಯುತ್ತದೆ,

೩. ಉಡುಪಿ ತಾಲ್ಲೂಕಿನ ಕೋಟಗೋಳಿಯಂಗಡಿ ಮತ್ತು ಕೊಳಲಗಿರಿ ಪೆರ್ಡೂರು ರಸ್ತೆಯ ಮಾರ್ಗಗಳ ಅಭಿವೃದ್ಧಿ

ಶ್ರೀ ಬಸವರಾಜ್ (ಬ್ರಹ್ಮಾವರ).—ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ತಾಲ್ಲೂಕಿನ ಉತ್ತರ ಭಾಗದಲ್ಲಿ ಕರಾವಳಿಯಿಂದ ಮಲೆನಾಡಿನವರೆಗೆ ಸಂಪರ್ಕ ಕಲ್ಪಿಸುವ ಪ್ರಮುಖ ಮಾರ್ಗ ಕೋಟಗೋಳಿಯಂಗಡಿ ರಸ್ತೆ ಮತ್ತು ಕೊಳಲಗಿರಿ ಪೆರ್ಡೂರು ರಸ್ತೆ, ಈ ರಸ್ತೆಯ ಸ್ವಲ್ಪ ಭಾಗ ಮಾತ್ರ ಅಭಿವೃದ್ಧಿ ಆಗಿದ್ದು ಮಲೆನಾಡಿನ ಹಳ್ಳಿಗಳ ಮೂಲಕ ಹಾದು ಹೋಗುವ ಭಾಗದ ಅವಸ್ಥೆ ಶೋಚನೀಯವಾಗಿದೆ. ಈ ವಿಚಾರದಲ್ಲಿ ಕಳೆದ ಕೆಲವು ವರ್ಷಗಳಿಂದ ಸಂಬಂಧಪಟ್ಟ ಇಲಾಖೆಯು ಮುಂದೆ ಹಾಗೂ ವಿಧಾನ ಸೌಧದಲ್ಲಿ ನಮ್ಮ ಸತತ ಪ್ರಸ್ತಾಪಕ್ಕೆ ಮಂಂದಿನ ವರ್ಷದಲ್ಲಿ ಖಂಡಿತ ಕ್ರಮ ಕೈಗೊಳ್ಳಲಾಗುವುದೆಂಬ ಭರವಸೆ ಸಿಕ್ಕಿದ್ದರೂ, ನಾವು ಕಂಡಿದ್ದು ಮಾತ್ರ ಎಲ್ಲ ಕಡೆಗಳಿಂದಲೂ ಈ ವಿಚಾರದಲ್ಲಿ ಸಂಪೂರ್ಣ ಕ್ರಿಯಾಲೋಪ ಪರಿಣಾಮವಾಗಿ ಆ ಪ್ರದೇಶದ ಜನರಿಗೆ ಕೋಪ, ಸರ್ಕಾರಕ್ಕೆ ಶಾಪ, ಶಾಸಕರಿಗೆ ತಾಪ ಇವುಗಳನ್ನೆಲ್ಲಾ ನಿವಾರಿಸಲು ಒಂದೇ ದಾರಿ ಕೋಟಗೋಳಿಯಂಗಡಿ ಮತ್ತು ಕೊಳಲಗಿರಿ ಪೆರ್ಡೂರು ಮಾರ್ಗಗಳನ್ನು ಸಂಪೂರ್ಣ ಅಭಿವೃದ್ಧಿಪಡಿಸಿ ತಾರಿನ ಹೊದಿಕೆ ಹಾಕಿಸುವುದು. ಈ ವಿಚಾರದಲ್ಲಿ ಸೂಕ್ತ ಕ್ರಮಕ್ಕಾಗಿ ಒತ್ತಾಯಿಸುತ್ತೇನೆ.

ಪ್ರೊ ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರಿಗೆ ಇದರ ಬಗ್ಗೆ ಉತ್ತರವನ್ನು ತರಿಸಿಕೊಡುತ್ತೇನೆ.

೪. ಬಂಟ್ವಾಳ ತಾಲ್ಲೂಕಿಗೆ ಮಂಗಳೂರಿನಿಂದ ನೇರವಾಗಿ ವಿದ್ಯುತ್ ಸರಬರಾಜಿನ ವ್ಯವಸ್ಥೆಯಲ್ಲಿ ವಿಳಂಬ

ಶ್ರೀ ಬಿ. ಎ. ಉಮರಬ್ಬ (ವಿಧ್ಲ).—ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿಗೆ ಮಂಗಳೂರಿನಿಂದ ನೇರವಾಗಿ ವಿದ್ಯುತ್ ಸರಬರಾಜಾಗುತ್ತಿದ್ದು ಕೆಲವು ಕಾರಣಗಳಿಂದ ನಿವಿತ್ತ ಇದನ್ನು ಪುತ್ತೂರು ಮೂಲಕ ಸರಬರಾಜನ್ನು ತಾತ್ಕಾಲಿಕ ಎಂಬ ನೆಲೆಯಲ್ಲಿ ಹಲವಾರು ತಿಂಗಳಿಂದ ಮಾಡಲಾಗುತ್ತಿದೆ. ಇದರ ಪರಿಣಾಮ ಬಂಟ್ವಾಳ ತಾಲ್ಲೂಕಿಗೆ ವಿದ್ಯುತ್ ಇದ್ದೂ ಇಲ್ಲದಂತಾಗಿದೆ. ವಿದ್ಯಾರ್ಥಿಗಳ ಪರೀಕ್ಷೆ. ರೈತರ ನೀರಿನ ಸಮಸ್ಯೆ ತೀವ್ರವಾಗಿದೆ, ಮಂಗಳೂರಿನಿಂದ ನೇರ ಸರಬರಾಜಿನ ಈ ತೀವ್ರ ವಿಳಂಬದ ಕಾರಣವೇನು? ಇದನ್ನು ಯಾವಾಗ ಸರಿಪಡಿಸಲಾಗುತ್ತದೆ ಎಂಬುದನ್ನು ಮಾನ್ಯ ವಿದ್ಯುತ್ ಸಚಿವರಿಂದ ನಿರ್ದಿಷ್ಟವಾಗಿ ತಿಳಿಯಬಯಸುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ (ಮಾನ್ಯ ವಿದ್ಯುತ್ ಖಾತೆಯ ಸಚಿವರ ಪರವಾಗಿ).—ಮಾನ್ಯ ಅಧ್ಯಕ್ಷರೆ, ಮಾನ್ಯ ವಿದ್ಯುತ್ ಖಾತೆಯ ಸಚಿವರಿಗೆ ಗಂಟಲಿನ ತೊಂದರೆ ಇರುವುದರಿಂದ ಅವರ ಪರವಾಗಿ ನಾನು ಈ ಹೇಳಿಕೆಯನ್ನು ನೀಡುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿಗೆ ಹಾಲಿ ಪುತ್ತೂರು ಸ್ಟೇಷನ್‌ನಿಂದ ವಿದ್ಯುತ್ ಸರಬರಾಜಾಗುತ್ತಿದೆ. ಈ ಹಿಂದೆ ಇಲ್ಲಿಗೆ ಮಂಗಳೂರಿನಿಂದ ನೇರ ವಿದ್ಯುತ್ ಸರಬರಾಜಾಗುತ್ತಿತ್ತು. ಆದರೆ ಈ ೩೩ ಕೆ.ವಿ. ವಿದ್ಯುತ್ ಮಾರ್ಗದಲ್ಲಿ ಮಾರ್ಪಾಡು ಮಾಡಲು ಕ್ರಮ ಕೈಗೊಂಡಿದ್ದರಿಂದ ತಾತ್ಕಾಲಿಕವಾಗಿ ಪುತ್ತೂರು ಸ್ಟೇಷನ್‌ನಿಂದ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ಮಂಗಳೂರಿನಿಂದ ನೇರ